108.	144:ಸೇವಾಲಾಲ ಯುವಕ ಮಂಡಳ ದನಶೆಟ್ಟಿ ಎಲ್ ಟಿ	208
109.	145.ಟಿ ಎ ಪಿ ಸಿ ಎಮ ಎಸ ಇಂಟಿ	566
110.	145o:ಸದರ ಗೋರಿಪಟ್ಟಿ ಎಲ್‌ಟಿ	348
111.	151:ಗ್ರಾಮ ಲೆಕ್ಕಾಧಿಕಾರಿ ಹಿಂಗಣಿ	175
112.	146:ಜಿ.ಎಮ್.ದೇಶಪಾಂಡೆ ಎಲ್.ಟಿ. ನಂ.1	205
113.	148:ಗ್ರಾಮ ಮಂಡಳ ಸಾತಪೂರ	187
114.	147:ದಾವಲ ಮಲಿಕ ವಿ ವ ಸಂಗ ಹೊಸಮನಿಹಟ್ಟಿ	133
115.	149: ವಿ ಎಸ್ ಎಸ್ ಹಂಜಗಿ	552
	ಒಟ್ಟು	43440

ಆರ್.ಟಿ.ಓ. ಚೆಕ್ ಪೋಸ್ಟ್ ಆದಾಯ

509 (994) ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) :– ಮಾನ್ಯ ಸಾರಿಗೆ, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಝಳಕಿ ಚೆಕ್ ಪೋಸ್ಟ್ ಪ್ರಾರಂಭವಾದ ವರ್ಷದಿಂದ ಇಲ್ಲಿಯವರೆಗೆ ಪ್ರತಿ ವರ್ಷ ರಾಜ್ಯಕ್ಕೆ ಸಂದಾಯವಾದ ಆದಾಯವೆಷ್ಟು ; ಪ್ರತಿ ವರ್ಷದ ಮಾಹಿತಿಯನ್ನು ಬೇರೆ ಬೇರೆಯಾಗಿ ನೀಡುವುದು.

ಆ) ಝಳಕಿ ಆರ್.ಟಿ.ಓ. ಚೆಕ್ ಪೋಸ್ಟ್‌ಗೆ ಇಲ್ಲಿಯವರೆಗೆ ಯಾವ ಯಾವ ದಿನಾಂಕ ಲೋಕಾಯುಕ್ತರು ದಾಳಿ ಮಾಡಿದ್ದಾರೆ ; ಈ ಪ್ರತಿ ದಾಳಿಯಲ್ಲಿ ಸಿಕ್ಕಿಬಿದ್ದ ಮೋಟಾರ್ ನಿರೀಕ್ಷಕರು ಮತ್ತು ಹಿರಿಯ

ಮೋಟಾರ್ ವಾಹನ ನಿರೀಕ್ಷಕರ ಹೆಸರುಗಳೇನು ; ಪ್ರತಿ ದಾಳಿಯ ಸಮಯದಲ್ಲಿ ಎಷ್ಟು ಅಕ್ರಮ ಹಣವನ್ನು ಪತ್ತೆ ಮಾಡಲಾಯಿತು ;

ಇ) ಝಳಕಿ ಆರ್.ಟಿ.ಓ. ಚೆಕ್ ಪೋಸ್ಟ್‌ನ್ನು ಬೇರೆ ಕಡೆಗೆ ಸ್ಥಳಾಂತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

ಈ) ಹಾಗಿದ್ದರೆ, ಅದಕ್ಕೆ ಕಾರಣಗಳೇನು ?

ಶ್ರೀ ಆರ್. ಅಶೋಕ್ : (ಸಾರಿಗೆ, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):-

ಅ) ಒಟ್ಟು 101.10 ಕೋಟಿ ರೂ.ಗಳು, ವರ್ಷವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ

ಇ) ಹೌದು

ಈ) ಝಳಕಿ ತನಿಖಾ ಠಾಣೆಯು ರಾಷ್ಟ್ರೀಯ ಹೆದ್ದಾರಿ-13 ರಲ್ಲಿದ್ದು, ಪ್ರಸ್ತುತ ಸದರಿ ರಸ್ತೆಯ ಅಗಲೀಕರಣ (ಚತುಷ್ಪಥ ರಸ್ತೆ) ಕಾರ್ಯ ಪ್ರಾರಂಭದ ಹಂತದಲ್ಲಿರುತ್ತದೆ. ರಸ್ತೆ ಅಗಲೀಕರಣವಾದಲ್ಲಿ ತನಿಖಾ ಠಾಣೆಯ ಕಾರ್ಯಕ್ಕೆ ತೊಂದರೆಯಾಗುತ್ತದೆ. ರಾಜಸ್ವ ಸಂಗ್ರಹಣೆಯ ದೃಷ್ಟಿಯಿಂದ ತನಿಖಾ ಠಾಣೆಯ ಸ್ಥಳಾಂತರಿಸಲು ಉದ್ದೇಶಿಸಲಾಗಿದೆ.

ಅನುಬಂಧ-1

THE REVENUE COLLECTION FROM ZALKI CHECK POSTS

FOR THE YEAR 1990-91 TO 2009-10

(Rs. in Lakhs)

Sl. No.	Year	Amount in Lakhs
1.	1991	73
2.	1992	68
3.	1993	78
4.	1994	59
5.	1995	171
6.	1996	238
7.	1997	270
8.	1998	315
9.	1999	339
10.	2000	426
11.	2001	443
12.	2002	533
13.	2003	686
14.	2004	805
15.	2005	922
16.	2006	968

17.	2007	932
18.	2008	966
19.	2009	872
20.	2010	946
	Total	10110

ಅನುಬಂಧ–2

ಝಳಕಿ ಆರ್.ಟಿ.ಓ ಚೆಕ್ ಪೋಸ್ಟ್‌ಗೆ ಲೋಕಾಯುಕ್ತರು ನಡೆಸಿದ ದಾಳಿಯ ದಿನಾಂಕ, ಸದರಿ ದಿನಾಂಕದ್ದಂದು ಕಾರ್ಯನಿರ್ವಹಿಸುತ್ತಿದ್ದ ಹಿರಿಯ ಮೋಟಾರು ವಾಹನ ನಿರೀಕ್ಷಕರು/ಮೋಟಾರು ವಾಹನ ನಿರೀಕ್ಷಕರುಗಳ ಹೆಸರುಗಳು ಹಾಗೂ ಮುಟ್ಟುಗೋಲು ಹಾಕಿಕೊಂಡ ಹಣದ ವಿವರಗಳು ಈ ಕೆಳಗಿನಂತಿದೆ.

ದಾಳಿಯ ದಿನಾಂಕ	ಸದರಿ ದಿನಾಂಕದಂದು ಕಾರ್ಯನಿರ್ವಹಿಸುತ್ತಿದ್ದ ಹಿರಿಯ ಮೋಟಾರು ವಾಹನ ನಿರೀಕ್ಷಕರು/ಮೋಟಾರು ವಾಹನ ನಿರೀಕ್ಷಕರ ಹೆಸರು	ಮುಟ್ಟುಗೋಲು ಹಾಕಿಕೊಂಡ ಮೊತ್ತ
9–3–2007	ಶ್ರೀ ಲಕ್ಷ್ಮೀನರಸಪ್ಪ, ಹಿ.ಮೋ.ವಾ.ನಿ., ಪ್ರಾ.ಸಾ.ಕ., ಬಿಜಾಪುರ (ನಿವೃತ್ತಿಯಾಗಿರುತ್ತಾರೆ) ಶ್ರೀ ಎಮ್.ಎನ್. ಲಕ್ಷ್ಮೀನಾರಾಯಣಪ್ಪ, ಹಿ.ಮೋ.ವಾ.ನಿ., ಪ್ರಾ.ಸಾ.ಕ., ಬಿಜಾಪುರ	

	(ಸದರಿಯವರು ದಾಳಿ ನಡೆಯುವ ಮೊದಲು ತನಿಖಾ ಠಾಣೆಯ ಹೊರಗಡೆ ಕಾರ್ಯನಿರ್ವಹಿಸುತ್ತಿದ್ದು, ಅನಾರೋಗ್ಯದ ನಿಮಿತ್ತ ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ಹೋಗಿದ್ದರು) ಶ್ರೀ ಎನ್.ಎಸ್. ಕೃಷ್ಣಮೂರ್ತಿ ಗುಪ್ತ, ಮೋ.ವಾ.ನಿ., ಪ್ರಾ.ಸಾ.ಕ., ಬಿಜಾಪುರ (ನಿವೃತ್ತಿಯಾಗಿರುತ್ತಾರೆ)	ಲೋಕಾಯುಕ್ತದಿಂದ ಇದುವರೆಗೂ ಯಾವುದೇ ವರದಿ ಬಂದಿರುವುದಿಲ್ಲ
10-1-2010	ಶ್ರೀ ಚಂದ್ರಕಾಂತ ದೇವೇಂದ್ರಪ್ಪ ಅಥರ್ಗಾ, ಹಿ.ಮೋ.ವಾ.ನಿ., ಸ.ಪ್ರಾ.ಸಾ.ಕ., ಗೋಕಾಕ್ (ಸೆಪ್ಟೆಂಬರ್ 2009 ರಿಂದ ನಿಯೋಜನೆ ಮೇಲೆ ಪ್ರಾ.ಸಾ.ಕ., ಬಿಜಾಪುರದಲ್ಲಿ ಕಾರ್ಯನಿರ್ವಹಿಸುತ್ತಿದ್ದರು) ಶ್ರೀ ರಾಮಸ್ವಾಮಿ ರಾಂಗೇಗೌಡ, ಮೋ.ವಾ.ನಿ., ಪ್ರಾ.ಸಾ.ಕ., ಬಿಜಾಪುರ	ರೂ. 9,430/-

ರಾಜ್ಯದಲ್ಲಿಯ ರಸ್ತೆ ಸಾರಿಗೆ ನಿಗಮಗಳು

510 (995) ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) :- ಮಾನ್ಯ ಸಾರಿಗೆ, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ರಾಜ್ಯದಲ್ಲಿರುವ ರಸ್ತೆ ಸಾರಿಗೆ ನಿಗಮಗಳು ಯಾವುವು ?